ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 : ಮೇ 19, 2020**

# ಪತ್ರಿಕಾ ಪ್ರಕಟಣೆ

## ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ದೇಣಿಗೆ

**ಬೆಂಗಳೂರು, ಮೇ 19 ( ಕರ್ನಾಟಕ ವಾರ್ತೆ )**

ಮುಖ್ಯಮಂತ್ರಿಗಳ ಕೋವಿಡ್ 19 ಪರಿಹಾರ ನಿಧಿಗೆ ವಿವಿಧ ವೈದ್ಯಕೀಯ ಸಂಸ್ಥೆಗಳು ಹಾಗೂ ವ್ಯಕ್ತಿಗಳು ಸಲ್ಲಿಸಿದ ದೇಣಿಗೆಯ ಚೆಕ್‌ನ್ನು ವೈದ್ಯಕೀಯ ಶಿಕ್ಷಣ ಸಚಿವ ಡಾ : ಸುಧಾಕರ್ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಹಸ್ತಾಂತರ ಮಾಡಿದರು.

ಅಸೋಸಿಯೇಷನ್ ಆಫ್ ಫಿಸೀಶಿಯನ್ಸ್ ಆಫ್ ಇಂಡಿಯಾ, ಕರ್ನಾಟಕ ಶಾಖೆಯ ವತಿಯಿಂದ 5 ಲಕ್ಷ ರೂ. ಹಾಗೂ ಚಿಕ್ಕಬಳ್ಳಾಪುರದ ಕೆ.ಎನ್. ಕಿಶೋರ್ ಅವರು 25 ಸಾವಿರ ರೂ.ಗಳ ದೇಣಿಗೆ ನೀಡಿದ್ದಾರೆ.

ಛಾಯಾಚಿತ್ರ ಲಗತ್ತಿಸಿದೆ)

## ಜೀವವೈವಿಧ್ಯ ದಿನಾಚರಣೆ ಹಾಗೂ ಪ್ರಶಸ್ತಿ ವಿತರಣೆ

**ಬೆಂಗಳೂರು, ಮೇ 19 ( ಕರ್ನಾಟಕ ವಾರ್ತೆ )**

ಕರ್ನಾಟಕ ಜೀವವೈವಿಧ್ಯ ಮಂಡಳಿ ಮೇ 22 ರಂದು 11 ಗಂಟೆಗೆ ಜಾಗತಿಕ ಜೀವವೈವಿಧ್ಯ ದಿನಾಚರಣೆ ಕಾರ್ಯಕ್ರಮವನ್ನು ಮುಖ್ಯಮಂತ್ರಿಗಳ ಗೃಹ ಕಛೇರಿ ಕೃಷ್ಣಾದಲ್ಲಿ ಏರ್ಪಡಿಸಿದೆ. ಮುಖ್ಯಮಂತ್ರಿಗಳು ಜೀವವೈವಿಧ್ಯ ಅಭಿಯಾನ ಉದ್ಘಾಟಿಸಿ, ವಾರ್ಷಿಕ ಪ್ರಶಸ್ತಿ ವಿತರಿಸಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# ಬಿ.ಎಂ.ಟಿ.ಸಿ.ಯಿಂದ ಸುರಕ್ಷಿತ ಸಾರಿಗೆ ಸೇವೆ

ಬೆಂಗಳೂರು, ಮೇ 19 ( ಕರ್ನಾಟಕ ವಾರ್ತೆ )

**COVID-19** ಲಾಕ್‌ಡೌನ್ ಮುಕ್ತಾಯಗೊಂಡ ನಂತರದಲ್ಲಿ ಸಮರ್ಪಕ ಹಾಗೂ ಸುರಕ್ಷಿತ ಸಾರಿಗೆ ಸೇವೆಯನ್ನು ಸಾರ್ವಜನಿಕ ಪ್ರಯಾಣಿಕರಿಗೆ ಒದಗಿಸುವ ಹಾಗೂ ಕೋರೊನಾ ವೈರಾಣು ಸೋಂಕು ಹರಡುವಿಕೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಬಸ್ಸುಗಳಲ್ಲಿ ಸ್ವಚ್ಛತೆ, ನೈರ್ಮಲ್ಯ ಮತ್ತು ಶುಚಿತ್ವ ಕುರಿತು ಅರಿವು ಉಂಟು ಮಾಡಿದೆ. ಸಾರ್ವಜನಿಕ ಸಾರಿಗೆಯನ್ನು ಬಳಸುವಂತೆ ಪ್ರಯಾಣಿಕರಲ್ಲಿ ವಿಶ್ವಾಸವನ್ನು ಮೂಡಿಸಿ ಕೇಂದ್ರ/ರಾಜ್ಯ ಸರ್ಕಾರಗಳ ಮಾರ್ಗಸೂಚಿಯಂತೆ ಬೆಂ.ಮ.ಸಾ.ಸಂಸ್ಥೆಯು ಬಸ್ಸುಗಳ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ.

ಸಾರಿಗೆ ಸೇವೆಗಳ ಲಭ್ಯತೆ:-

ಪ್ರಥಮ ಹಂತದಲ್ಲಿ, ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕಂಟೈನ್ಮೆಂಟ್ ವಲಯಗಳನ್ನು ಹೊರತುಪಡಿಸಿ ಪ್ರಯಾಣಿಕರ ದಟ್ಟಣೆ ಇರುವಂತಹ ಪ್ರಮುಖ ಮಾರ್ಗಗಳಲ್ಲಿ ಸಾರಿಗೆಗಳನ್ನು ಕಾರ್ಯಾಚರಿಸಲಾಗುವುದು.

ಕಾರ್ಯಾಚರಣೆ ವೇಳೆ:-

ರಾತ್ರಿ ಕರ್ಫ್ಯೂ ಹಿನ್ನೆಲೆಯಲ್ಲಿ ಬೆಳಿಗ್ಗೆ 07:00 ಗಂಟೆಯಿಂದ ಸಂಜೆ 19:00 ಗಂಟೆಯವರೆಗೆ ಸಾರಿಗೆ ಸೇವೆಗಳು ಕಾರ್ಯನಿರ್ವಹಿಸಲಾಗುವುದು.

ಟಿಕೇಟ್ ವ್ಯವಸ್ಥೆ:-

ಸಾಮಾಜಿಕ ಅಂತರವನ್ನು ಕಾಪಾಡುವ ನಿಟ್ಟಿನಲ್ಲಿ "ಮಾಸಿಕ ಪಾಸು/ವಾರದ ಪಾಸು/ದೈನಂದಿನ ಪಾಸುಗಳನ್ನು" ಹೊಂದಿರುವವರನ್ನು ಮಾತ್ರ ಪ್ರಯಾಣಿಸಲು ಅನುಮತಿಸಲಾಗುವುದು.

ಪ್ರಯಾಣಿಕರ ಅನುಕೂಲಕ್ಕಾಗಿ ರೂ.300/- ಮುಖ ಬೆಲೆಯ ವಾರದ ಪಾಸುಗಳನ್ನು ಪರಿಚಯಿಸಲಾಗುತ್ತಿದೆ.

ಸಂಸ್ಥೆಯ ಎಲ್ಲಾ ಸಾಮಾನ್ಯ ಸೇವೆಗಳಲ್ಲಿ ಮಾನ್ಯತೆ ಹೊಂದಿರುತ್ತದೆ. ಪಾಸು ಪಡೆದ ದಿನವನ್ನು ಸೇರಿ ಒಟ್ಟು 7 ದಿನಗಳವರೆಗೆ ಮಾನ್ಯತೆ ಹೊಂದಿರುತ್ತದೆ. ವಾರದ ಪಾಸನ್ನು ಪಡೆಯಲು/ ಮಾನ್ಯ ಮಾಡಲು ಭಾವಚಿತ್ರವಿರುವ ಯಾವುದಾದರೂ ಗುರುತಿನ ಚೀಟಿಯನ್ನು ಹೊಂದಿರುವುದು ಕಡ್ಡಾಯವಾಗಿರುತ್ತದೆ.

ವಾರದ ಪಾಸುಗಳನ್ನು ಬೆಳಿಗ್ಗೆ 07:00 ಗಂಟೆಯಿಂದ ಸಂಜೆ 07:00 ಗಂಟೆಯವರೆಗೆ ಪ್ರಸ್ತುತ ಬಸ್ ನಿಲ್ದಾಣಗಳಲ್ಲಿ ವಿತರಣೆ ಮಾಡಲಾಗುವುದು.

ದೈನಂದಿನ ಪಾಸುಗಳನ್ನು (ರೂ.70/- ಮುಖಬೆಲೆ) ನಿರ್ವಾಹಕರ ಮೂಲಕ ಬಸ್ಸುಗಳಲ್ಲಿ ವಿತರಿಸಲಾಗುವುದು. ಇತರೇ ಪಾಸುದಾರರು ಹಾಗೂ ಟಿಕೆಟ್ ಮೂಲಕ ಪ್ರಯಾಣಿಸಲು ಅವಕಾಶವಿರುವುದಿಲ್ಲ. ನಗದುರಹಿತ ವಹಿವಾಟು ಉತ್ತೇಜಿಸಲು ಡಿಜಿಟಲ್ ಟಿಕೇಟಿಂಗ್‌ನ್ನು **(QR code scanning)** ಪ್ರಾಯೋಗಿಕವಾಗಿ ಆಯ್ದ 15 ಘಟಕಗಳ 75 ಬಸ್ಸುಗಳಲ್ಲಿ ಪ್ರಾರಂಭಿಸಲಾಗುವುದು.

ಚಾಲನಾ ಸಿಬ್ಬಂದಿಗಳ ಹೊಣೆಗಾರಿಕೆ:–

ಚಾಲನಾ ಸಿಬ್ಬಂದಿಗಳು ಪ್ರತಿದಿನ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಸಮಯದಲ್ಲಿ ದೇಹದ ಉಷ್ಣಾಂಶವನ್ನು (**temperature**) ಪರೀಕ್ಷಿಸಲಾಗುವುದು. ಕರ್ತವ್ಯ ನಿರ್ವಹಿಸುವಾಗ ಚಾಲನಾ ಸಿಬ್ಬಂದಿಗಳು ಮುಖಗವಸು **(Face Mask)** ನ್ನು ಧರಿಸುವುದು. ಚಾಲನಾ ಸಿಬ್ಬಂದಿಗಳು ಸ್ಯಾನಿಟೈಸರ್‌ನ್ನು ಬಳಸಿ, ಶುಚಿತ್ವವನ್ನು ಕಾಪಾಡುವುದು. ಪ್ರಯಾಣಿಕರು ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವಂತೆ ನಿಗಾ ವಹಿಸುವುದು. ಪ್ರಯಾಣಿಕರನ್ನು ಬಸ್ಸಿನಲ್ಲಿ ಆಸನಗಳು ಖಾಲಿಯಿದ್ದಾಗ ಮಾತ್ರ ಅನುಮತಿಸುವುದು. ನಿಗದಿತ ನಿಲುಗಡೆಗಳಲ್ಲಿ ಪ್ರಯಾಣಿಕರನ್ನು ಹತ್ತಿಸುವುದು/ಇಳಿಸುವುದು. ನಿಲ್ದಾಣ/ನಿಲುಗಡೆಗಳಲ್ಲಿ ಪ್ರಯಾಣಿಕರ ದಟ್ಟಣೆ ಹೆಚ್ಚು ಇದ್ದಲ್ಲಿ, ಹತ್ತಿರದ ಘಟಕ ವ್ಯವಸ್ಥಾಪಕರಿಗೆ/ ವಿಭಾಗೀಯ ಸಂಚಾರ ಅಧಿಕಾರಿಗಳಿಗೆ ಮಾಹಿತಿ ನೀಡುವುದು.

ವಾಹನಗಳ ನಿರ್ವಹಣೆ:–

ತಾಂತ್ರಿಕವಾಗಿ ಸುಸ್ಥಿತಿಯಲ್ಲಿರುವ ಶುಚಿತ್ವದಿಂದ ಕೂಡಿದ ಹಾಗೂ ಸೋಂಕು ನಿವಾರಕಗಳನ್ನು ಸಿಂಪಡಿಸಿರುವ ಬಸ್ಸುಗಳನ್ನು ಕಾರ್ಯಾಚರಣೆಗೆ ನಿಯೋಜಿಸುವುದು.

ಸಾರ್ವಜನಿಕ ಪ್ರಯಾಣಿಕರಿಗೆ ಮುನ್ನೆಚ್ಚರಿಕೆ ಕ್ರಮಗಳು:–

ಪ್ರಯಾಣಿಕರು ಮೂಗು ಮತ್ತು ಬಾಯಿ ಮುಚ್ಚಿಕೊಳ್ಳುವಂತೆ ಬಟ್ಟೆ ಅಥವಾ ಮುಖಗವಸು **(Face Mask)** (ಸರ್ಕಾರದ ಅಧಿಸೂಚನೆಯಂತೆ) ಕಡ್ಡಾಯವಾಗಿ ಧರಿಸುವುದು. ಸಾರ್ವಜನಿಕ ಪ್ರಯಾಣಿಕರು ಬಸ್ಸುಗಳಲ್ಲಿ ಹಿಂದಿನ ಬಾಗಿಲು ಮೂಲಕ ಹತ್ತುವುದು ಹಾಗೂ ಮುಂದಿನ ಬಾಗಿಲು ಮೂಲಕ ಇಳಿಯುವುದು ಕಡ್ಡಾಯವಾಗಿರುತ್ತದೆ. ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಸರತಿ ಸಾಲಿನಲ್ಲಿ **(Queue system)** ಬಸ್ಸನ್ನು ಹತ್ತುವುದು/ಇಳಿಯುವುದು. ಪ್ರಯಾಣಿಕರ ಆಸನಗಳು ಭರ್ತಿಯಾಗಿದ್ದಲ್ಲಿ, ಬಸ್ಸನ್ನು ಹತ್ತಬಾರದು. ಮುಂದಿನ ಬಸ್ಸಿಗಾಗಿ ಕಾಯುವುದು. ಜ್ವರ ಹಾಗೂ ಇತರೆ ಖಾಯಿಲೆಗಳಿಂದ ಬಳಲುತ್ತಿರುವ ಪ್ರಯಾಣಿಕರು ಸಂಸ್ಥೆಯ ವಾಹನಗಳಲ್ಲಿ ಪ್ರಯಾಣಿಸಬಾರದು. ಹಿರಿಯ ನಾಗರೀಕರು, ಗರ್ಭಿಣಿಯರು ಹಾಗೂ 10 ವರ್ಷದ ಒಳಗಿನ ಮಕ್ಕಳಿಗೆ ಬಸ್ಸಿನಲ್ಲಿ ಪ್ರಯಾಣಿಸಲು ಅವಕಾಶವಿಲ್ಲ. ಪ್ರಯಾಣಿಕರು ಬಸ್ಸುಗಳನ್ನು ಹಾಗೂ ಬಸ್ ನಿಲ್ದಾಣಗಳನ್ನು ಶುಚಿತ್ವವಾಗಿ ಇಟ್ಟುಕೊಳ್ಳಲು ಸಹಕರಿಸುವಂತೆ ಕೋರಲಾಗಿದೆ.

# Providing of transport facility for passengers

Bengaluru, May 19 (Karnataka Information)

In view of providing safe and convenient transport facility and to control the spread of Corona virus and to create a sense of trust for the passengers using Public

Transport by ensuring required cleanliness and hygiene in the bus for the commuters, BMTC has planned to operate buses as per the guidelines of the Central and State Government.

**Service Availability:-**

Initially, operations will be resumed on high density routes in Bangalore city except containment areas.

**Operation timings:-**

In view of night curfew enforcement, bus services will be provided between 07:00 hours to 19:00 hours.

**Ticket System:-**

To maintain social distancing passengers having Monthly pass/Weekly pass /Daily passes will be allowed to travel in the buses.

For the benefit of commuters Rs. 300/- Weekly pass has been introduced. Valid for all Non-Air conditioned buses (Ordinary buses). Weekly pass will be valid for 7 days including day of issue. Photo Identity card is mandatory to obtain Weekly pass. Same should be produced while on traveling. Weekly passes will be issued at specified Bus stations between 07:00hrs to 19:00 hours. List of Bus stations are appended. Daily passes (Rs.70/-) will be issued by conductors. Other types of passes and tickets are not allowed. To promote cash less transaction, Digital Ticketing (QR code scanning) will be introduced in 75 buses of 15 Depots on trial basis.

**Responsibility of Crew:-**

Body temperature of crew will be checked daily before the commencement of duty. Crew should wear Facemask while on duty. Crew should use sanitizer and maintain hygiene. Crew shall monitor social distancing between passengers. Passengers are allowed to board the bus only if seats are available. Buses should be stopped at designated bus stops for boarding and de-boarding. In case more passengers are noticed in Bus Stations/stops, crew should inform the same to the nearest Depot Managers/ DTOs.

**Vehicle Maintenance:-**

Mechanically fit, well cleaned and disinfected buses will deployed for operations.

**Precautionary measures for Passengers:-**

Mandatory use of masks or cloth (as per Government notification) for covering mouth and nose. Entry prohibited for the passengers without mask.

Mandatory use of dedicated doors for boarding and off -boarding. Rear door should be mandatorily used for entering by the passengers and front door should be used for alighting by the passengers.

Passengers shall maintain social distance while boarding/ alighting the buses and follow queue system. If all seats are accommodated in the buses, passengers shall not board the bus and wait for another bus. Passengers suffering from fever and other ailments are not allowed to travel in bus. Senior citizens, Pregnant Women and Children below age of 10 Years are not allowed to travel in bus. Passenger co-operation is requested in maintaining cleanliness in buses and Bus Stations.

## ತುರ್ತು ಪರಿಸ್ಥಿಯಲ್ಲಿ ಆನ್ ಲೈನ್ ಶಿಕ್ಷಣ ಅನಿವಾರ್ಯ– ಪ್ರೊ. ವೇಣುಗೋಪಾಲ್ ಕೆ.ಆರ್.

**ಬೆಂಗಳೂರು, ಮೇ 19 ( ಕರ್ನಾಟಕ ವಾರ್ತೆ )**

ಆನ್‌ಲೈನ್ ಶಿಕ್ಷಣ ಇಂದು ಅಂತರರಾಷ್ಟ್ರೀಯ ಮಟ್ಟದಿಂದ ತಜ್ಞರನ್ನು ಆಮಂತ್ರಿಸಿ ಅವರ ಅನುಭವಗಳನ್ನು ಹಂಚಿಕೊಳ್ಳಲು ವೇದಿಕೆಯನ್ನು ಒದಗಿಸಿದೆ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ವೇಣುಗೋಪಾಲ್ ಕೆ.ಆರ್. ಅಭಿಪ್ರಾಯಪಟ್ಟರು.

ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯುನ್ಮಾನ ಮಾಧ್ಯಮ ವಿಭಾಗ ಏರ್ಪಡಿಸಿದ್ದ ಒಂದು ವಾರದ ಮಾಧ್ಯಮ ಕೌಶಲ್ಯ ಅಭಿವೃದ್ಧಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪಾರಂಪರಿಕ ಶಿಕ್ಷಣಕ್ಕೆ ಆನ್ ಲೈನ್ ಶಿಕ್ಷಣ ಪರ್ಯಾಯವಲ್ಲ. ಆದರೆ ಸಾಮಾನ್ಯ ಸಂದರ್ಭಗಳಲ್ಲಿ ತರಗತಿಗಳಿಗೆ ಕರೆತರಲಾರದ ತಜ್ಞರನ್ನು ಆನ್ ಲೈನ್ ಮೂಲಕ ತರಲು ಸಾಧ್ಯವಾಗಿದೆ. ಹಾಗಾಗಿ ವಿಶ್ವವಿದ್ಯಾಲಯದಲ್ಲಿ ಆನ್ ಲೈನ್ ಶಿಕ್ಷಣಕ್ಕೆ ನನ್ನ ಬೆಂಬಲ ಸದಾ ಇರುತ್ತದೆ. ಕೊರೊನಾದಂತಹ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಪರ್ಯಾಯ ಮಾರ್ಗಗಳನ್ನು ಹುಡುಕಿ ತರಗತಿಗಳನ್ನು, ಕಾರ್ಯಾಗಾರಗಳನ್ನು ನಡೆಸುವ ಅನಿವಾರ್ಯತೆ ಸೃಷ್ಟಿಯಾಗಿದ್ದು, ವಿಶ್ವವಿದ್ಯಾಲಯದ ಬೋಧಕರು ಹಾಗೂ ವಿದ್ಯಾರ್ಥಿಗಳು ಸೂಕ್ತವಾಗಿ ಬಳಕೆ ಮಾಡಿಕೊಳ್ಳುತ್ತಿರುವುದು ಸಂತೋಷದ ವಿಷಯ ಎಂದರು.

ಮುಖ್ಯ ಅತಿಥಿಯಾಗಿದ್ದ ನಿವೃತ್ತ ಪ್ರಾಧ್ಯಾಪಕ ಪ್ರೊ. ಎ.ಎಸ್. ಬಾಲಸುಬ್ರಹ್ಮಣ್ಯ ಮಾತನಾಡಿ, ಆನ್ ಲೈನ್ ಮಾಧ್ಯಮಗಳು ಅನೇಕ ಅವಕಾಶಗಳನ್ನು ಕಲ್ಪಿಸಿ ಕೊಟ್ಟಿವೆ. ಮಾಹಿತಿ ಮತ್ತು, ಸಂವಹನ ತಂತ್ರಜ್ಞಾನ ಶಿಕ್ಷಣ ಕ್ರಾಂತಿಗೆ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಇರಬಹುದಾದ ಅನೇಕ ಸಮಸ್ಯೆಗಳಿಗೆ ಉತ್ತರವಾಗಿ ಬೆಳೆದು ನಿಂತಿದೆ. ಒಬ್ಬ ಉತ್ತಮ ಶಿಕ್ಷಕ ಭೌಗೋಳಿಕ ವ್ಯಾಪ್ತಿಯನ್ನು ಮೀರಿ ಅಸಕ್ತರನ್ನು ತಲುಪುವುದಕ್ಕೆ ಸಾಧ್ಯವಾಗಿದೆ. ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಜ್ಞಾನದೊಂದಿಗೆ ಕಲೆ ಕೂಡ ಮುಖ್ಯ. ಅದನ್ನು ಇಂತಹ ಕಾರ್ಯಾಗಾರಗಳ ಮೂಲಕ ಒದಗಿಸಿ ಕೊಡಬಹುದಾಗಿದೆ ಎಂದರು.

ಕಾರ್ಯಾಗಾರದ ಮೊದಲ ದಿನದ ಆಮಂತ್ರಿತ ಭಾಷಣಕಾರರಾಗಿದ್ದ ಖಾಸಗಿ ವಾಹಿನಿಯೊಂದರ ಹಿರಿಯ ಸುದ್ದಿ ನಿರ್ಮಾಪಕ ಹರಿಪ್ರಸಾದ್, ಟೆಲಿವಿಷನ್ ಸುದ್ದಿ ಮಾದರಿಗಳು, ಸುದ್ದಿ ಪ್ರಸ್ತುತ ಪಡಿಸುವಿಕೆ, ವರದಿಗಾರಿಕೆ ಸೇರಿದಂತೆ ಹಲವಾರು ವಿಷಯಗಳನ್ನು ಕುರಿತು ವಿವರಿಸಿದರು. ಪತ್ರಕರ್ತರಿಗೆ ಯಾವುದೇ ಇಸಮ್ ಗಳು ಇರಬಾರದು ಜರ್ನಲಿಸಂನ ಇಸಮ್ ಇರಬೇಕು. ಪತ್ರಿಕೋದ್ಯಮದ ಎಲ್ಲಾ ನೀತಿ ನಿರೂಪಣೆಗಳನ್ನು ಪಾಲಿಸಿಕೊಂಡು ವೃತ್ತಿ ನಿರ್ವಹಿಸಬೇಕು ಎಂದರು. ನಂತರ ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಅವರ ಜೊತೆ ಮಾತುಕತೆ ನಡೆಸಿ ತಮ್ಮ ಸಂಶಯಗಳನ್ನು ಬಗೆಹರಿಸಿಕೊಂಡರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿದ್ಯುನ್ಮಾನ ಮಾಧ್ಯಮ ವಿಭಾಗದ ಸಂಯೋಜಕರಾದ ಡಾ. ವಾಹಿನಿ ಪ್ರಾಸ್ತಾವಿಕ ಭಾಷಣ ಮಾಡಿದರು. ಸಹಾಯಕ ಪ್ರಾಧ್ಯಾಪಕರಾದ ಡಾ. ರಾಜೇಶ್ವರಿ ಕಾರ್ಯಾಗಾರವನ್ನು ನಿರ್ವಹಿಸಿದರು. ವಿಭಾಗದ ಡಾ. ಶ್ರೀಪತಿ, ಅತಿಥಿ ಉಪನ್ಯಾಸಕರು, ವಿದ್ಯಾರ್ಥಿಗಳು ಹಾಗೂ ಜರ್ಮನಿ ಸೇರಿದಂತೆ ದೇಶದ ಮತ್ತು ರಾಜ್ಯದ ವಿವಿಧ ಭಾಗಗಳ ಸುಮಾರು 250 ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

## ನೀರಿನ ಬಿಲ್ ಪಾವತಿ ಹಾಗೂ ಕಾಲರಾ ತಡೆಗಟ್ಟುವ ನಿಟ್ಟಿನಲ್ಲಿ ಬೆಂಗಳೂರು ಜಲಮಂಡಳಿ ಕೈಗೊಂಡ ದೈನಂದಿನ ಕ್ರಮಗಳು

**ಬೆಂಗಳೂರು, ಮೇ 19 ( ಕರ್ನಾಟಕ ವಾರ್ತೆ )**

ಬೆಂಗಳೂರು ಜಲಮಂಡಳಿಯು ನೀರು ಸರಬರಾಜು ಕೊಳವೆಯಲ್ಲಿ ಸೋರುವಿಕೆಯನ್ನು ಸಾರ್ವಜನಿಕರಿಂದ ಅಥವಾ ಮಂಡಳಿಯ ಸಿಬ್ಬಂದಿಯವರು ಗುರುತಿಸಿದ ತಕ್ಷಣ ಸೋರುವಿಕೆ ತಡೆಗಟ್ಟಲು ಕ್ರಮವಹಿಸಲಾಗುತ್ತದೆ. ಇದಲ್ಲದೆ ಕಲುಷಿತ ನೀರು ಸರಬರಾಜಾಗುತ್ತಿದ್ದಲ್ಲಿ ತಕ್ಷಣ ಕ್ರಮವಹಿಸಿ ಕಲುಷಿತ ನೀರು ಸರಬರಾಜು ಕೊಳವೆಗೆ ಸೇರದಂತೆ ಕೂಡಲೇ ಕಾರ್ಯ ಪ್ರವೃತ್ತರಾಗಿ ಕ್ರಮವಹಿಸಲಾಗುತ್ತದೆ. **ಕಾಲರಾ ಮತ್ತು ಜಿ.ಇ**. ಗೆ ಸಂಬಂಧಿಸಿದ ಮಾಹಿತಿಯನ್ನು ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯಿಂದ ದಿನಾಂಕ 01.05.2020 ರಿಂದ 17.05.2020 ರವರೆಗೆ ನೋಂದಣಿಯಾದ ಪ್ರಕರಣಗಳ ವಿಳಾಸವನ್ನು ಪಡೆದು ಅಂತಹ ಸ್ಥಳಗಳಿಂದ ನೀರಿನ ಮಾದರಿಯನ್ನು ಸಂಗ್ರಹಿಸಲಾಗಿ, ಕ್ರೋಢೀಕರಿಸಿದ ಫಲಿತಾಂಶದ ಸಂಪೂರ್ಣ ವಿವರವನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿರುವುದು. ಫಲಿತಾಂಶದ ಸಂಕ್ಷಿಪ್ತ ವಿವರ ಈ ಕೆಳಕಂಡಂತಿದೆ.

ದಿನಾಂಕ 01.05.2020 ರಿಂದ 17.05.2020 ರವರೆಗೆ ದಾಖಲುಗೊಂಡ ಒಟ್ಟು 40 ನೀರಿನ ಮಾದರಿಯನ್ನು ಸಂಗ್ರಹಿಸಿದ್ದು, 2 ಮಾದರಿಗೆ ಸಂಬಂಧಿಸಿದ ಪ್ರದೇಶಗಳಲ್ಲಿ ನೀರು ಸರಬರಾಜು ಇಲ್ಲದಿದ್ದ ಕಾರಣ ನೀರಿನ ಮಾದರಿಯನ್ನು ಸಂಗ್ರಹಿಸಿರುವುದಿಲ್ಲ, 32 ಮಾದರಿಗೆ ಸಂಬಂಧಿಸಿದ ನೀರಿನ ಮಾದರಿಗಳನ್ನು ಸಂಗ್ರಹಿಸಲಾಗಿದ್ದು, 30 **ಮಾದರಿಗಳ ಫಲಿತಾಂಶವು ಕುಡಿಯಲು ಯೋಗ್ಯವಾಗಿರುತ್ತದೆ**. 02 ಮಾದರಿಗಳ ಫಲಿತಾಂಶಗಳು ನಿರೀಕ್ಷಣೆಯಲ್ಲಿರುತ್ತದೆ. ಉಳಿದ 06 ಮಾದರಿಗಳಿಗೆ ಸಂಬಂಧಿಸಿದ ಪ್ರದೇಶಗಳು ಜಲ ಮಂಡಳಿಯ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ.

**ನೀರಿನ ಬಿಲ್ ಪಾವತಿಯನ್ನು ಮಂಡಳಿಯ ವೆಬ್‌ಸೈಟ್ ಮುಖಾಂತರ ಮಾಡಬಹುದಾಗಿರುತ್ತದೆ ಹಾಗೂ ಮಂಡಳಿಯ ಆ್ಯಪ್ ಆಗಿರುವ "BWSSB Payment App" ಮುಖಾಂತರ Quick Pay ಮಾಡಬಹುದಾಗಿರುತ್ತದೆ. ಮಂಡಳಿಯ ವೆಬ್‌ಸೈಟ್‌ನಲ್ಲಿ "BWSSB Payment App" ನ ಲಿಂಕ್ ಲಭ್ಯವಿದ್ದು, Google Play store ನಲ್ಲಿಯೂ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಆನ್‌ಲೈನ್ ಪೇಮೆಂಟ್ ಸೇವೆಗಳಾದ BBPS(Bharat Bill Payment System)ನಿಂದ ಲಭ್ಯವಿರುವ Paytm, Phone-Pe, Google Pay, ಮುಖಾಂತರವಾಗಿಯೂ ನೀರಿನ ಬಿಲ್ ಪಾವತಿಯನ್ನು ಮಾಡಬಹುದಾಗಿರುತ್ತದೆ. ಅಲ್ಲದೆ ಜಲಮಂಡಳಿ ಕಛೇರಿಗಳ ಆವರಣದಲ್ಲಿರುವ ಕಿಯೋಸ್ಕ್ ಮಿಷನ್‌ಗಳಲ್ಲಿ ಹಾಗೂ ಬೆಂಗಳೂರು**

**ಒನ್ ಸೇವಾ ಕೇಂದ್ರದ ಮುಖಾಂತರವೂ ಸಹ ಹಣ ಪಾವತಿ ಮಾಡಬಹುದಾಗಿರುತ್ತದೆ. ಗ್ರಾಹಕರು ಇದರ ಸದುಪಯೋಗಪಡಿಸಿಕೊಳ್ಳಲು ಕೋರಲಾಗಿದೆ.**

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ಸಹಾಯವಾಣಿಯ ಸಂಖ್ಯೆ:22238888 ಹಾಗೂ 1916 ಮತ್ತು ವಾಟ್ಸ್ಆಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ. ತಮ್ಮ ಸಮೀಪದ ಸೇವಾಠಾಣೆಯ ದೂರವಾಣಿ ಸಂಖ್ಯೆಯನ್ನು ಮಂಡಳಿಯ ಅಧಿಕೃತ ವೆಬ್‌ಸೈಟ್:www.bwssb.gov.in ನಲ್ಲಿ ಪಡೆಯಬಹುದಾಗಿರುತ್ತದೆ.

## Prevent cholera
## and water bill payment

BWSSB immediately take action to stop the leakage as soon as water leakages are detected and reported from public or from staff of BWSSB. Adding to this, if contamination of water is detected it is taken care that contaminated water does not get in contact to the water supply pipe lines. BWSSB collected address of the cases reported about Cholera and GE from Health & Family Welfare Department, Government Epidemic Disease Hospital, Bangalore, 01.05.2020 to 17.05.2020 tested the samples and results of the samples are enclosed with this letter. The abstract of the result is as mentioned below.

Among the 40 cases reported from 01.05.2020 to 17.05.2020, samples from 02 area was not collected since water supply for that area was not on the day when the water sample were collected, samples from 32 area were collected and result of **30 sample was obtained as suitable for potable purpose(SPP)**. Result of 2 sample is awaited. The areas of remaining 06 cases does not comes under BWSSB limits.

**All consumers are requested to make payment through the BWSSB official website: www.bwssb.gov.in. BWSSB's App called "BWSSB Payment App" is also available and Quick Pay can be made through this app. Customers can login to the app via the link provided in BWSSB official website and app can also be downloaded from Google pay store. Payment can also be made through online services of BBPS (Bharath Bill Payment System) like Paytm, Phone pe, Google pay etc**. and in Bangalore one and KIOSK Machines at BWSSB Office Premises.

It is also informed that BWSSB Call center number 080-22238888 is available 24/7 to receive the complaint of customers. Along with this, whatsapp number:8762228888 and toll free number 1916 is also available. Service station address and contact details can be obtained through BWSSB official **website :www.bwssb.gov.in .**

,

# ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳೊಂದಿಗೆ ದೂರವಾಣಿಯಲ್ಲಿ ಪ್ರೌಢಶಿಕ್ಷಣ ಸಚಿವರು

**ಬೆಂಗಳೂರು, ಮೇ 19 ( ಕರ್ನಾಟಕ ವಾರ್ತೆ )**

ಲಾಕ್‌ಡೌನ್ ಸಡಿಲಿಕೆ ನಂತರ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ದಿನಾಂಕ ನಿಗದಿಯಾದ ನಂತರ ವಿದ್ಯಾರ್ಥಿಗಳ ಮನಸ್ಥಿತಿ ಅರಿಯಲು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಮಂಗಳವಾರ ರಾಜ್ಯದ ವಿವಿಧೆಡೆಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳೊಂದಿಗೆ ದೂರವಾಣಿಯಲ್ಲಿ ಮಾತನಾಡಿ ಪರೀಕ್ಷೆಗೆ ಸಜ್ಜಾಗಿರುವ ಕುರಿತಂತೆ ವಿಚಾರಿಸಿದರು.

ತಮ್ಮ ಕಚೇರಿಯಿಂದ ಶಿವಮೊಗ್ಗ, ಹೊಸಕೋಟೆ, ಬೆಂಗಳೂರು, ಬಾಗಲಕೋಟೆ, ಇಳ್ಕಲ್, ಹಾನಗಲ್, ಸವಣೂರು, ಗದಗ, ಹುಬ್ಬಳ್ಳಿ ಮತ್ತಿತರ ಭಾಗದ 40ಕ್ಕೂ ಹೆಚ್ಚು ವಿದ್ಯಾರ್ಥಿ ವಿದ್ಯಾರ್ಥಿನಿಯರೊಂದಿಗೆ ಸಂವಾದ ನಡೆಸಿದ ಸಚಿವರು, ಕೊರೋನಾ ಹಿನ್ನೆಲೆಯಲ್ಲಿ ಪರೀಕ್ಷೆ ಈ ಬಾರಿ ಸ್ವಲ್ಪ ತಡವಾಗಿ ಆರಂಭವಾಗುತ್ತಿರುವುದಕ್ಕೆ ಬೇಜಾರು ಮಾಡಿಕೊಳ್ಳದೇ ಚೆನ್ನಾಗಿ ಓದಬೇಕು ಎಂದು ಸಲಹೆ ನೀಡಿದರು.

ಆರೋಗ್ಯದ ಕಡೆ ಹೆಚ್ಚಿನ ಗಮನ ನೀಡುವುದು ಸೇರಿದಂತೆ ದೂರದರ್ಶನ ಚಂದನ ವಾಹಿನಿಯಲ್ಲಿ ಪುನರ್ಮನನ ತರಗತಿಗಳನ್ನು ನೋಡುತ್ತಿದ್ದೀರಾ ಎಂದು ಪ್ರಶ್ನಿಸಿದರು. ಸಚಿವರ ಕಚೇರಿಯಿಂದ ಫೋನ್ ಕರೆ ಬಂದ ಸಂದರ್ಭದಲ್ಲಿ ಇಳಕಲ್‌ನ ವಿದ್ಯಾರ್ಥಿನಿಯೊಬ್ಬಳು ಚಂದನ ವಾಹಿನಿಯಲ್ಲಿ ಪುನರ್ಮನನ ತರಗತಿಗಳನ್ನು ವೀಕ್ಷಿಸುತ್ತಿದ್ದಳು. ಪುನರ್ಮನನ ತರಗತಿಗಳು ಚೆನ್ನಾಗಿ ಮೂಡಿಬರುತ್ತಿದ್ದು, ಈಗ ಶಾಲಾ ತರಗತಿಗಳು ನಡೆಯುತ್ತಿಲ್ಲವಾದ್ದರಿಂದ ಇದರಿಂದ ಸಾಕಷ್ಟು ಉಪಯೋಗವಾಗುತ್ತಿದೆ ಎಂದು ತಿಳಿಸಿದ್ದು ಗಮನಾರ್ಹವಾಗಿತ್ತು.

ಶಿವಮೊಗ್ಗದ ಆದಿಚುಂಚನಗಿರಿ ಶಾಲೆಯ ವಿದ್ಯಾರ್ಥಿನಿ ಎನ್.ಎಸ್. ಶ್ರದ್ಧಾ ಒಡೆಯರಪುರ ವಿದ್ಯಾರ್ಥಿನಿ ತಮ್ಮ ಮನೆಯಲ್ಲಿ ಟಿ.ವಿ. ಇಲ್ಲವಾದ್ದರಿಂದ ಚಂದನ ವಾಹಿನಿ ನೋಡಲು ಆಗುತ್ತಿಲ್ಲ ಎಂದು ಹೇಳಿದ ತಕ್ಷಣವೇ ಶಿವಮೊಗ್ಗದ ಬಿಇಒಗೆ ಫೋನಾಯಿಸಿದ ಸಚಿವರು, ವಿದ್ಯಾರ್ಥಿನಿಯ ಫೋನ್ ನಂಬರ್ ನೀಡಿದ್ದಲ್ಲದೇ ಆ

ವಿದ್ಯಾರ್ಥಿನಿಗೆ ಚಂದನ ವಾಹಿನಿಯ ಪುನರ್ಮನನ ತರಗತಿ ವೀಕ್ಷಿಸಲು ಸೂಕ್ತ ವ್ಯವಸ್ಥೆ ಮಾಡಿಕೊಡಲು ಸೂಚಿಸಿದರು.

ಸಚಿವರೊಂದಿಗೆ ಮಾತನಾಡಿದ ಎಲ್ಲ ವಿದ್ಯಾರ್ಥಿಗಳು ಕೊನೆಗೂ ಪರೀಕ್ಷಾ ವೇಳಾಪಟ್ಟಿ ಪ್ರಕಟಿಸಿದ್ದರಿಂದ ಖುಷಿಯಾಗಿದ್ದು, ನಿನ್ನೆಯಿಂದಲೇ ಪರೀಕ್ಷೆಗೆ ಗಂಭೀರವಾಗಿ ಓದುತ್ತಿರುವುದಾಗಿ ಹೇಳಿಕೊಂಡರು. ಪರೀಕ್ಷೆಯೆಂದರೆ ಭೂತವಲ್ಲ, ಅದೊಂದು ಕ್ರೀಡೆ ಇದ್ದಂತೆ ಎಂದು ತಿಳಿದು ಸಂತೋಷದಿಂದ ಪರೀಕ್ಷಾ ಕೊಠಡಿಗೆ ತೆರಳುವಂತೆ ಸಚಿವರು ತಿಳಿಸಿದರು. ಹಾಗೆಯೇ ಕೊರೋನ ಹಿನ್ನೆಲೆಯಲ್ಲಿ ಪರೀಕ್ಷೆಗೆ ಕೈಗೊಂಡ ಸಿದ್ಧತೆಗಳನ್ನು ವಿವರಿಸಿದರಲ್ಲದೇ ತಾವು ಕಷ್ಟಪಟ್ಟು ಓದಿ ಪರೀಕ್ಷೆಯನ್ನು ಖುಷಿಯಿಂದ ಬರೆಯುವುದಷ್ಟೇ ನಿಮ್ಮ ಕೆಲಸ ಎಂದು ಸಲಹೆ ಮಾಡಿದರು.

ಹಾಗೆಯೇ ನಿಮ್ಮ ಸ್ನೇಹಿತರಾರಾದರೂ ತಮ್ಮ ಶಾಲೆಯಿಂದ ದೂರದ ಊರಿನಲ್ಲಿದ್ದರೆ, ಅವರಿಗೆ ಹತ್ತಿರದ ಪರೀಕ್ಷಾ ಕೇಂದ್ರಕ್ಕೆ ಬದಲಾಯಿಸಿಕೊಂಡು ಅವರು ಇರುವ ಊರಿನ ಸಮೀಪದಲ್ಲೇ ಪರೀಕ್ಷೆ ಬರೆಯಲು ಅವಕಾಶ ಇರುವ ಕುರಿತು ತಿಳಿಸಬೇಕೆಂದೂ ಸುರೇಶ್ ಕುಮಾರ್ ಸಲಹೆ ನೀಡಿದರು.